

# ಜವಾನನ ಸಲಹೆ

■ **ಮಲ್ಲಿಕಾರ್ಜುನ ಸುರಧೇನುಪುರ**
ಕಲೆ: ಸಂತೋಷ್ ಸಸಿಹಿತ್ಲು

ಸಿರಿವೆನ್ನೆಲಾ ಸಾಮ್ರಾಜ್ಯದ ಮಹಾರಾಜ ಧೀರೇಂದ್ರ ವರ್ಮಾ ಅವರ ಏಕೈಕ ಪುತ್ರ ಸುರೇಂದ್ರ ವರ್ಮಾ ತನ್ನ ತಂದೆಯ ಬಳಿ ಬಂದು 'ಅಪ್ಪ ನನಗೆ ಅದ್ಭುತವಾದ ಕಾರು ಬೇಕು, ಆ ಕಾರು ಹೇಗಿರಬೇಕು ಅಂದರೆ ನೋಡಲು ಆಕರ್ಷಕವಾಗಿರಬೇಕು. ಓಡಿಸಲು ಸುಲಭವಾಗಿರಬೇಕು ಪ್ರಯಾಣ ಮಾಡುತ್ತಿದ್ದರೆ ಪುಷ್ಪಕ ವಿಮಾನದಲ್ಲಿ ಪ್ರಯಾಣ ಮಾಡಿದಂತೆ ಇರಬೇಕು' ಎಂದು ಕೇಳಿಕೊಂಡನು. ಮಹಾರಾಜ 'ಆಗಲಿ' ಎಂದಷ್ಟೇ ಹೇಳಿ ಕಳುಹಿಸಿದ.

ಮರುದಿನ ರಾಜ್ಯದ ಪ್ರತಿಷ್ಠಿತ ಕಾರು ತಯಾರಿಕಾ ಕಂಪನಿಯ ನಾಲ್ವರು ತಜ್ಞರನ್ನು ಅರಮನೆಗೆ ಕರೆಸಿಕೊಂಡು ಮಗನ ಬೇಡಿಕೆಯನ್ನು ಅವರ ಮುಂದಿರಿಸಿದ. ತಜ್ಞರು ಆಯಿತು ಇಡೀ ವಿಶ್ವವೆ ತನ್ನತ್ತ ತಿರುಗಿ ನೋಡಬೇಕು ಅಂತಹ ಅದ್ಭುತ ಕಾರನ್ನು ತಯಾರಿಸಿ ಕೊಡುವುದಾಗಿ ಮಾತು ಕೊಟ್ಟರು. ಮಹಾರಾಜ ಅವರಿಗೆ ಅಗತ್ಯವಾದ ಎಲ್ಲ ಬಗೆಯ ಸವಲತ್ತುಗಳನ್ನು ಒದಗಿಸಿದ.

ಆರು ತಿಂಗಳ ತರುವಾಯ ಕಾರು ತಯಾರಿಕಾ ತಜ್ಞರು ಅರಮನೆಗೆ ಬಂದರು. ತಮ್ಮ ಅದ್ಭುತವಾದ ಕಾರು ಸಿದ್ಧವಾಗಿದೆ. ತಾವು ಬಂದು ನೋಡಬೇಕು. ನೀವೇ ಚಾಲನೆ ನೀಡಬೇಕು ಎಂದು ಕೇಳಿಕೊಂಡರು. ಧೀರೇಂದ್ರ ವರ್ಮಾ ಮತ್ತು ಸುರೇಂದ್ರ ವರ್ಮಾ ಇಬ್ಬರೂ ಕಾರು ತಯಾರಿ ಆಗಿದ್ದ ಶೆಡ್ ಬಳಿ ಬಂದರು. ಅಲ್ಲಿಯ ನೌಕರ ಶಟರ್ ಮೇಲಕ್ಕೆ ಎತ್ತಿದ. ಕಾರಿನ ಬಣ್ಣ, ಅದರ ಆಕಾರ ಕಂಡ ಧೀರೇಂದ್ರ ವರ್ಮಾ ಆಹಾ! ಅದ್ಭುತ, ಅದ್ಭುತ ಎಂದು ಉದ್ಗಾರ ತೆಗೆದ. ಕಾರು ತಯಾರಕರನ್ನು ಅಪ್ಪಿದ. ಒಂದೆರಡು ನಿಮಿಷಗಳ ನಂತರ ತಜ್ಞರಿಂದ ಕಾರಿನ ಕೀ ಪಡೆದ ಸುರೇಂದ್ರ ವರ್ಮಾ ಚಲಾಯಿಸಿಕೊಂಡು ಬಂದ. ಶೆಡ್‌ನ ಎತ್ತರ ಒಂದಿಂಚು ಕಡಿಮೆಯಿತ್ತು. ಕಾರು ಹೊರಬರುವಂತಿರಲಿಲ್ಲ. ಕಾರಿನ ತಜ್ಞರು ಕಾರಿನ ಮೇಲ್ಭಾಗ ತೆಗೆದಿರಿಸುತ್ತೇವೆ. ಹೊರಗಡೆ ಬಂದ ನಂತರ ಮತ್ತೆ ಜೋಡಿಸಿಕೊಡುತ್ತೇವೆ ಎಂಬ ಉಪಾಯ ನೀಡಿದರು. ಮಹಾರಾಜ ಇದಕ್ಕೆ ಸಮ್ಮತಿ ನೀಡಲಿಲ್ಲ. 'ನೀವೆಲ್ಲ ಮಹಾನ್ ತಜ್ಞರಿದ್ದೀರಿ, ಕಾರು ಹೊರಹೋಗುವಂತೆ ವಿನ್ಯಾಸ ಮಾಡಲಿಲ್ಲ ಅಂದರೆ ನೀವೆಂತಹ ತಜ್ಞರು, ಕಾರಿನ ಹೊರಭಾಗವೇ ಹೀಗಾದರೆ ಎಂಜಿನ್ ಕ್ಷಮತೆಯ ನಂಬುವುದಾದರೂ ಹೇಗೆ? ಶಟರ್ ತೆಗೆಯಬಾರದು, ಕಾರಿನ ಮೇಲ್ಭಾಗವನ್ನು ತೆಗೆಯಬಾರದು. ಇಪ್ಪತ್ನಾಲ್ಕು ಗಂಟೆಗಳ ಒಳಗೆ ಕಾರು ಹೊರಬರಬೇಕು ಅಷ್ಟೇ' ಎಂದು ಷರತ್ತು ಹಾಕಿದ. ಮಹಾರಾಜ ಸರಸರನೆ ಹೊರನಡೆದ, ಸುರೇಂದ್ರ ವರ್ಮಾ ತಂದೆಯನ್ನು ಹಿಂಬಾಲಿಸಿದ. ದ್ವಾರಪಾಲಕ, ಮಹಾರಾಜರಿಗೆ ನಮಸ್ಕಾರ ಮಾಡಿದ. 'ನನ್ನದೊಂದು ಉಪಾಯ ಇದೆ. ನೀವು ಅಪ್ಪಣೆ ಕೊಟ್ಟರೆ ಹೇಳುತ್ತೇನೆ' ಅಂತ ಕೇಳಿಕೊಂಡ. ಜವಾನನ ಮಾತು ಕೇಳುವ ಸ್ಥಿತಿಯಲ್ಲಿರದ ಮಹಾರಾಜರು ಮನ್ನಣೆ ನೀಡದೆ ಹೊರಟು ಹೋದರು. ಹಿಂದೆ ಬರುತ್ತಿದ್ದ ಸುರೇಂದ್ರ ವರ್ಮಾ 'ಆಯಿತು ಅದೇನು ಹೇಳಯ್ಯಾ?' ಎಂದರು.

ಆಗ ಜವಾನ 'ನಾಲ್ಕು ಚಕ್ರಗಳಲ್ಲಿ ಇರುವ ಗಾಳಿಯನ್ನು ಕಾಲುಭಾಗ ಹೊರಬಿಟ್ಟರಾಯಿತು. ಕಾರಿನ ಎತ್ತರ ಎರಡು ಇಂಚು ಇಳಿಯುತ್ತೆ. ಆಗ ಕಾರನ್ನು ಹೊರತಂದರಾಯಿತು' ಎಂಬ ಸಲಹೆ ನೀಡಿದ. ತುಂಬಾ ತಲೆ ಕೆಡಿಸಿಕೊಂಡಿದ್ದ ತಜ್ಞರು ಈ ಮಾತನ್ನು ಕೇಳಿಸಿಕೊಂಡರು. ಕೂಡಲೇ ನಾಲ್ಕು ಜನ ತಜ್ಞರು ನಾಲ್ಕು ಚಕ್ರಗಳಲ್ಲಿನ ಗಾಳಿಯನ್ನು ಒಂದಷ್ಟು ಹೊರಬಿಟ್ಟರು. ಕಾರಿನ ಎತ್ತರ ಸುಮಾರು ಎರಡು ಇಂಚು ಇಳಿಯಿತು. ಅಷ್ಟರಲ್ಲಿ ಅಲ್ಲಿಗೆ ಬಂದ ಸುರೇಂದ್ರ ವರ್ಮಾನಿಗೆ ಕಾರಿನ ಕೀ ನೀಡಿದರು.

ಸುರೇಂದ್ರ ವರ್ಮಾ ಕಾರು ಚಲಾಯಿಸುತ್ತಾ ಕಾರನ್ನು ಶೆಡ್‌ನ ಹೊರತಂದ. ನಂತರ ತಜ್ಞರು ನಾಲ್ಕು ಚಕ್ರಗಳಿಗೆ ಮತ್ತೆ ಗಾಳಿ ತುಂಬಿಸಿದರು. ಕಾರನ್ನು ಚಲಾಯಿಸಿಕೊಂಡು ಬಂದ ಸುರೇಂದ್ರ ವರ್ಮಾ ದ್ವಾರದಲ್ಲಿ ಜವಾನನಾಗಿ ನಿಂತಿದ್ದ ವ್ಯಕ್ತಿಯನ್ನು ಕಾರಿನಲ್ಲಿ ಕೂರಿಸಿಕೊಂಡು ಅರಮನೆಯತ್ತ ಕಾರು ಚಲಾಯಿಸುತ್ತಾ ಹೊರಟ. ಪಕ್ಕದಲ್ಲಿ ಇದ್ದ ಅವನಿಗೆ ಸುರೇಂದ್ರ ವರ್ಮಾ 'ತಜ್ಞರಿಗೆ ಹೊಳೆಯದ ಉಪಾಯ ನಿನಗೆ ಹೇಗೆ ಹೊಳೆಯಿತು' ಎಂದು ಕೇಳಿದ. ಅದಕ್ಕೆ ಆತ 'ಅವರು ಜಟಿಲವಾಗಿ ಯೋಚಿಸುತ್ತಾರೆ ನಾನು ಸರಳವಾಗಿ ಯೋಚನೆ ಮಾಡುತ್ತೇನೆ' ಎಂದು ಉತ್ತರ ನೀಡಿದ. ■